



ನೋನಿ ರಸ ತೆಗೆಯುವ ಯಂತ್ರ

(6ನೇ ಪುಟದಿಂದ)

ಶ್ರೀನಿವಾಸಮೂರ್ತಿ ದಂಪತಿಯ ನೋನಿ ಬೆಳೆಯ ಈ ಸಾಧನೆ ಹಲವು ರೈತರಿಗೆ ಸ್ಫೂರ್ತಿಯಾಗಿದೆ.

ಶ್ರೀನಿವಾಸಮೂರ್ತಿಯವರು ಪೂರ್ಣಪ್ರಮಾಣದ ನೋನಿ ಬೆಳೆಗಾರರಾದ ಹಿನ್ನೆಲೆ ಕುತೂಹಲಕರ. ಹಿಂದೊಮ್ಮೆ ಶ್ರೀನಿವಾಸಮೂರ್ತಿಯವರಿಗೆ ಇದ್ದಕ್ಕಿದ್ದ ಹಾಗೆ ಬೆನ್ನು ನೋವು ಉಂಟಾಯಿತು. ಬೆನ್ನು ಮೂಳೆ ತಜ್ಞರನ್ನು ಭೇಟಿಯಾಗಿ ಸುಮಾರು ಏಳು ವರ್ಷಗಳ ಕಾಲ ಅವರು ನೀಡಿದ ಔಷಧಿಯನ್ನು ಸೇವಿಸಿದರು. ಆದರೆ ಅದರಿಂದ ಯಾವುದೇ ಗುಣ ಕಾಣಲಿಲ್ಲ. ಬೆನ್ನು ನೋವು ಎಷ್ಟು ತೀವ್ರವಾಯಿತೆಂದರೆ ಹಾಸಿಗೆಯಿಂದ ಏಳಲೂ ಆಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಆತ್ಮೀಯರೊಬ್ಬರು ಚೆನ್ನೈ ಕಂಪೆನಿಯೊಂದು ಪ್ಯಾಕ್ ಮಾಡಿದ ನೋನಿ ಹಣ್ಣಿನ ರಸ ತರಿಸಿ 'ಇದನ್ನು ಕುಡಿದು ನೋಡಿ' ಎಂದರು. ಅದರಿಂದ ಸ್ವಲ್ಪ ಮಟ್ಟಿಗೆ ನೋವಿನ ಪ್ರಮಾಣ ಕಡಿಮೆಯಾಯಿತು.

ಮೂರ್ತಿಯವರು ಕೊಪ್ಪದ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ.ಸಂಜಯ್‌ರ ಸಹಕಾರದೊಂದಿಗೆ ಗಿಡ ತರಿಸಿ ತಮ್ಮ ತೋಟದಲ್ಲಿಯೇ ನೋನಿ ಬೆಳೆಸಿದರು. ನಂತರ ನೋನಿ ಹಣ್ಣಿನ ಸತ್ವ (ರಸ) ತೆಗೆದು ಸೇವಿಸತೊಡಗಿದರು. ಆರು ತಿಂಗಳಿನಲ್ಲಿ ಅವರ ಬೆನ್ನುನೋವು ಪೂರ್ಣ ಗುಣವಾಯಿತು.

ಆ ಬಳಿಕ ಮೂರ್ತಿಯವರು ಪೂರ್ಣ ಪ್ರಮಾಣದ ನೋನಿ ಬೆಳೆಗಾರರಾದರು. ಪತ್ನಿ ಅಂಬುಜಾಕ್ಷಿ ನೆರವಿನಿಂದ ತಮ್ಮ ತೋಟದಲ್ಲಿಯೇ ನೋನಿ ಗಿಡಗಳನ್ನು ಬೆಳೆಸಲು ಮುಂದಾದರು. ಆರಂಭದಲ್ಲಿ ನೋನಿ ಹಣ್ಣುಗಳನ್ನು ತರಿಸಿಕೊಂಡು ಹತ್ತು ಸಾವಿರದಷ್ಟು ಸಸಿ ಬೆಳೆಸಿ ಚೆನ್ನೈ ಕಂಪನಿಗೆ ಮಾರಾಟ ಮಾಡಿದರು. ಈಗ ಎರಡೂವರೆ ಎಕರೆ ಹೊಲದ ಜಾಗದಲ್ಲಿ ಸುತ್ತಲೂ ನೋನಿ ಹಣ್ಣಿನ ಗಿಡ ಬೆಳೆಸಿದ್ದಾರೆ. ತೋಟದ ಸುತ್ತೆಲ್ಲ ಕಣ್ಣು ಹಾಯಿಸಿದರೆ ಎಲ್ಲೆಡೆ ನೋನಿ ಗಿಡಗಳ ಹಸಿರು ಕಣ್ಮನ ಸೆಳೆಯುತ್ತದೆ.

ಆರಂಭದಲ್ಲಿ ಬರೀ ಗಿಡಗಳನ್ನಷ್ಟೆ ಬೆಳೆದು ಹೊರರಾಜ್ಯಗಳಿಗೆ ಔಷಧಿ ತಯಾರಿಕೆಗೆ ಕಳುಹಿಸುತ್ತಿದ್ದ ಮೂರ್ತಿ, ಈಗ ತಾವೇ ನೋನಿ ಔಷಧಿ ತಯಾರಿಸುತ್ತಾರೆ. 'ಅಮೃತ ನೋನಿ' ಹೆಸರಿನಲ್ಲಿ ಪರವಾನಗಿ ಪಡೆದು ಮಾರುಕಟ್ಟೆಯಲ್ಲಿ ಉತ್ಪನ್ನವನ್ನು ಪ್ರಚಾರ ಮಾಡಿದ್ದಾರೆ. ಯಾವುದೇ ಲಾಭದ ಉದ್ದೇಶವಿಲ್ಲದೆ ಅದನ್ನು ಮಾರಾಟ ಮಾಡುತ್ತಿರುವುದು ವಿಶೇಷ.

ಇದರ ಜತೆಗೆ ತಮ್ಮ ತೋಟದಿಂದ ನೋನಿ ಗಿಡಗಳನ್ನು ಇತರ ರೈತರಿಗೆ ಒದಗಿಸಿಕೊಟ್ಟು ಎಷ್ಟು ಹಣ್ಣುಗಳನ್ನು ಬೆಳೆದರೂ ತಾವೇ ಕೊಡುಕೊಳ್ಳುತ್ತೇವೆ ಎಂಬ ಒಪ್ಪಂದ ಮಾಡಿಕೊಂಡಿದ್ದಾರೆ.

ಉಪಯೋಗ: ನೋನಿ ರಸವನ್ನು ಗಂಟು ನೋವು, ಕೈ ಮಡಚುವ ತೊಂದರೆ, ಕಾಲು ನೋವು ಮತ್ತು ಮಂಡಿ ನೋವಿಗೆ ಪರಿಹಾರವಾಗಿ ಉಪಯೋಗಿಸುತ್ತಿದ್ದಾರೆ. ಉಸಿರಾಟದ ಸಮಸ್ಯೆ ನಿವಾರಣೆಗೂ ಇದು ಉಪಯುಕ್ತ. ಮುರಿದ ಎಲುಬುಗಳನ್ನು ಮರುಜೋಡಿಸಲು ಹಾಗೂ ಡಯಾಬಿಟಿಸ್, ಏರು ರಕ್ತದೊತ್ತಡ ನಿಯಂತ್ರಣಕ್ಕೂ ಬಳಕೆಯಾಗುತ್ತಿದೆ. ಮಲಬದ್ಧತೆಯ ಸಮಸ್ಯೆ ಇರುವವರೂ ನೋನಿ ರಸ ಸೇವಿಸಬಹುದು.

ಅನೇಕ ವಿಶ್ವವಿದ್ಯಾನಿಲಯಗಳು ನಡೆಸಿದ ಸಂಶೋಧನೆ ಸಮೀಕ್ಷೆಗಳ ಪ್ರಕಾರ, ನೋನಿಯ ರಸ ಆರೋಗ್ಯವರ್ಧಕ ಎಂಬುದು ದೃಢಪಟ್ಟಿದೆ. ಕೀಲುನೋವು, ಹೃದಯ ಸಂಬಂಧಿ ಕಾಯಿಲೆ, ಖಿನ್ನತೆ ಹಾಗೂ ನಿದ್ರಾಹೀನತೆಯಿಂದ ತೊಂದರೆ ಅನುಭವಿಸುತ್ತಿರುವವರು ಇದರ ಮೊರೆ ಹೋಗಬಹುದು.

ಸೇವಿಸುವ ಕ್ರಮ: ನೋನಿಯನ್ನು ಔಷಧಿಯಾಗಿ ಸೇವಿಸಬಯಸುವವರು ಮೊದಲ ಮೂರು ದಿನ ಬೆಳಗಿನ ಉಪಹಾರಕ್ಕೆ ಮುಂಚಿತವಾಗಿ ಒಂದು ಟೀ ಸ್ಪೂನ್, ಮಧ್ಯಾಹ್ನ ಊಟಕ್ಕೆ ಮುಂಚಿತವಾಗಿ ಒಂದು ಟೀ ಸ್ಪೂನ್ ಸೇವಿಸಬೇಕು. ಒಂದು ತಿಂಗಳ ಸೇವನೆಯ ನಂತರ ಉಪಹಾರಕ್ಕೆ ಮುಂಚೆ ಎರಡು ಸ್ಪೂನ್, ಮಧ್ಯಾಹ್ನ ಊಟಕ್ಕಿಂತ ಮುಂಚೆ ಎರಡು ಸ್ಪೂನ್ ರಸ ಸೇವಿಸಬೇಕು.

ನೋನಿಯ ಎಲೆಯೂ ಉಪಯುಕ್ತ. ಇದರ ಎಲೆಯಿಂದ ತೆಗೆದ ರಸ ಅನೇಕ ರೀತಿಯ ಚರ್ಮ ರೋಗಗಳನ್ನು ನಿವಾರಿಸಿದೆ. ಎಲೆಯ ಕಷಾಯ ಜ್ವರ ನಿವಾರಕ. ಹೆಚ್ಚಾಗಿ ಔಷಧಿ ರೂಪದಲ್ಲಿ ಬಳಸಲಾಗುವ ನೋನಿ ಬಗ್ಗೆ ಹೆಚ್ಚಿನ ಮಾಹಿತಿಗೆ ಶ್ರೀನಿವಾಸಮೂರ್ತಿ ಅವರ ಮೊಬೈಲ್: 94483-37733 ಸಂಪರ್ಕಿಸಬಹುದು.